ಮುನ್ನ ಆತ ಹೇಳಿದ ಶಬ್ದಗಳು ಕತ್ತಿಯ ಅಲುಗಿಗಿಂತಲೂ ಹರಿತವಾಗಿದ್ದವು. ತಲೆ ತನ್ನದು ಕೆಟ್ಟಿದೆಯೋ ಅಥವಾ ಅವನದು ಕೆಟ್ಟಿದೆಯೋ! ಹೆಂಡತಿಯನ್ನು ಕರೆದುಕೊಂಡು ಬರಬೇಕಂತೆ. ಅಂದರೆ ದೀಪಾಳಿಗೆ ಇನ್ನಷ್ಟು ಅವಮಾನ ಮಾಡಬೇಕಾಗಿದೆಯೇನೋ. ಯಾವಾಗಲೋ ಅವಳು ಸಿಟ್ಟಿನಲ್ಲಿ ಹೇಳಿದ ಮಾತುಗಳಿಗೆ ಪ್ರತೀಕಾರದ ಅಸ್ತ್ರಗಳನ್ನಾತ ಪಳಗಿಸಿ ಇಟ್ಟಿರಬಹುದು. ಆಫೀಸಿನವರನ್ನು ಕರಕೊಂಡು ಬಾ ಎನ್ನುತ್ತಾನೆ. ಅಂದರೆ ಮನೆಯ ವಿಷಯಗಳನ್ನು ಆಫೀಸಿಗೆ ತಿಳಿಸುತ್ತೇನೆ ಎನ್ನುವ ಹುನ್ನಾರವೆ! ತನ್ನ ಹದ್ದಿನ ಕಣ್ಣು ಬಳಸಿಕೊಂಡು ಯಾವುದರ ಮೇಲೆ, ಏನೆಲ್ಲದರ ಮೇಲೆ ಅವನು ನಿಗಾ ಇಟ್ಟಿದ್ದಾನೆಯೋ ಗೊತ್ತಿಲ್ಲ. ಇಟ್ಟರೆ ಇಟ್ಟುಕೊಳ್ಳಲಿ, ತನಗೇನೂ ನಷ್ಟವಿಲ್ಲ. ಇಪ್ಪತ್ತು ವರ್ಷ ತಾನು ದುಡ್ಡು ಕೊಡುತ್ತ ಬಂದೆ. ಮನೆಯ ಆಸ್ತಿಯನ್ನು ಹತ್ತು ಪಟ್ಟು ಹೆಚ್ಚಿಸಿದೆ. ನಾಗರಾಜನ ಎದೆಯಲ್ಲಿ ಸಳ್ ಎಂದಂತಾಯಿತು. ಬ್ಯಾಗಿನ ಜಿಪ್ ಎಳೆದು ಬಾಟಲಿಯಲ್ಲಿಯ ತಣ್ಣನೆಯ ನೀರು ಕುಡಿದ. ಈ ರಣರಣ ಬಿಸಿಲಿನ ಸಾಕ್ಷಿಯಾಗಿ, ಇಲ್ಲಿ ಕೂಡಿದ ಮಂದಿಯ ಸಾಕ್ಷಿಯಾಗಿ ಕೊನೆಗೆ ಹೆಂಡತಿ ಹೇಳಿದ ಮಾತೇ ಸತ್ಯವಾಗುತ್ತದೆಯೋ ಏನೋ, ಯಾರಿಗೆ ಗೊತ್ತು? ಬಹಳ ಹಿಂದೆಯೇ ಅವಳು ತನ್ನ ಉದ್ದ ಮೂಗು ತಿರುವಿ ಅಂದಿದ್ದಳು: 'ನೀನು ಹೀಂಗ ಕನಸು ಕಾಣ್ತಾ ಇರು. ನಿನ್ನ ಅವ್ವ, ನಿನ್ನ ಮಾಂವ, ನಿನ್ನ ತಂಗಿ ಮತ್ತ ನಿಮ್ಮ ಇಡೀ ಮನಿಮಂದಿ ಏನದಾರಲ್ಲ, ಅವರು ನೀ ತಿಳಕೊಂಡಂಗ ಇಲ್ಲ. ಅವರು ಯೋಚನೆ ಮಾಡೂದss ಬ್ಯಾರೆ. ನೀ ಯೋಚನೆ ಮಾಡೂದss ಬ್ಯಾರೆ. ಸೂಜಿಮೊನಿಗೆ ಹತ್ತುವಷ್ಟು ಮಣ್ಣ ಸೈತ ಅವರು ನಿನಗ ನಾಳೆ ಕೊಡಂಗಿಲ್ಲ.' ಅವಳು ಕೆರಳಿ ಕನಲುತ್ತಿದ್ದಳು. ಅವಳದು ತಪ್ಪಿಲ್ಲ. ತನ್ನದೂ ತಪ್ಪಿಲ್ಲ. ತಾನು ಒಡಹುಟ್ಟಿದವರ ಚಿಂತೆ ಮಾಡುತ್ತಿದ್ದೆ. ತನಗಾಗಿ ಜೀವ ತೇದವರಿಗೆ ತಾನು ಅಷ್ಟೂ ಮಾಡದಿದ್ದರೆ ಹೇಗೆ? ತಾನು ಅವಳಿಗೆ ತಿಳಿಹೇಳುತ್ತಿದ್ದೆ. ತನ್ನ ಸಮಜಾಯಿಷಿಯನ್ನು ಅವಳು ಕಿವಿಯಲ್ಲಿ ಹಾಕಿಕೊಳ್ಳದೆ ದೊಡ್ಡದಾಗಿ ನಕ್ಕು ಆಫೀಸಿಗೆ ಹೋಗುತ್ತಿದ್ದಳು.

ಮಾವನ ಮಾತಿನ ತರ್ಕ ನೋಡಿದರೆ ಹೆಂಡತಿಯ ಮಾತು ನಿಜವಾಗಿ ಪರಿಣಮಿಸುವಂತಿದೆ. ಎಷ್ಟೆಲ್ಲ ಧೂರ್ತ ವಿಚಾರಗಳು ಊರಲ್ಲಿ ಹುಟ್ಟಿಕೊಂಡಿವೆ. ಅಕ್ಕರೆಯನ್ನು ಹುಡುಕಿ ತಾನು ಹಳ್ಳಿಗೆ ಬಂದಾಗಲೆಲ್ಲ ಅಸೂಯೆಯೇ ತನ್ನನ್ನು ತಬ್ಬಿಕೊಂಡಿದೆ. ಮಾವನನ್ನು ತಾನು ಗಿಣಿ ಸ್ವಭಾವದವನೆಂದು ತಿಳಿದಿದ್ದೆ. ಆದರೆ ಅವನು ಗಿಡುಗನಾಗಿದ್ದಾನೆ. ತನ್ನನ್ನು ಕುಕ್ಕಿ ಕುಕ್ಕಿ ತಿನ್ನುತ್ತಿದ್ದಾನೆ. ತನ್ನ ನಿರೀಕ್ಷೆಗಳನ್ನು ತನ್ನ ಕಣ್ಣಮುಂದೆಯೇ ಧ್ವಂಸ ಮಾಡುತ್ತಿದ್ದಾನೆ. ಹೊಲದಲ್ಲಿ ತಾನು ಅದನ್ನು ಬೆಳೆಯಬೇಕು, ಇದನ್ನು ಬೆಳೆಯಬೇಕು, ಸಾವಯವ ಮಾವಿನಹಣ್ಣುಗಳನ್ನು ವಿದೇಶಕ್ಕೆ ಕಳಿಸಬೇಕು ಎಂದೆಲ್ಲ ಯೋಜಿಸಿದ್ದೆ. ಅವನಿಗೆ ಹೇಳಿಯೂ ಇದ್ದೆ. ಆದರೆ ತನ್ನ ನಿರೀಕ್ಷೆಗಳ ನೀಲಿನಕ್ಷೆಯನ್ನು ಕ್ಷಣಾರ್ಧದಲ್ಲಿ ಅವನು ಒರೆಸಿ ಹಾಕಿದ. ಓಹ್! ತನ್ನ ಮೇಲೆ ಅವನು ಹೇಗೆ ಎರಗುತ್ತಾನೆ. ಮೇಲ್ನೋಟಕ್ಕೆ ತನ್ನ ಒಳ್ಳೆಯದಕ್ಕೆ ಇಷ್ಟೆಲ್ಲ ಮಾಡುತ್ತಿದ್ದಾನೆಂಬ ಚಿತ್ರಣ ಕೊಡುತ್ತಾನೆ. ತನ್ನ ತಮ್ಮ, ತಂಗಿ ಎಲ್ಲರೂ ಅವನ ಪರವಾಗಿಯೇ ಇದ್ದಾರೆ. 'ಆಂವ ಹೇಳಿದಷ್ಟು ಮಾಡ್ಲಿಕ್ಕೆ ನಿನ್ನ ಗಂಟೇನು ಹೋಗ್ತದ?' ಅವರು ತಿರುಗಿ ತನ್ನನ್ನೇ ಪ್ರಶ್ನಿಸುತ್ತಾರೆ. ಗ್ರಾಮದ ಸೂಕ್ಷ್ಮಗಳು ಅವರಿಗೆ ಗೊತ್ತಿಲ್ಲ. ಒಬ್ಬ ಮನುಷ್ಯನನ್ನು, ಒಂದು ಕುಟುಂಬವನ್ನು ಇಲ್ಲವೆ ಒಂದು ಹಳ್ಳಿಯನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವ ಆಟಗಳಲ್ಲಿ ಎಷ್ಟೆಲ್ಲ ಸಮರತಂತ್ರಗಳು ಅಡಗಿರುತ್ತವೆ ಎಂಬುದು ಮುಗ್ಧ ಜನರಿಗೆ ತಿಳಿಯಲಾರದು. ಈ ಗಿಡುಗನ ಸಹಾಯದಿಂದ ಬೇರೆ ಯಾರೋ ತನ್ನ ಅಸ್ತಿತ್ವವನ್ನು ಅಲುಗಾಡಿಸುತ್ತಿದ್ದಾರೆ. ಜಂಬೂರಿಗೆ ಅಂಟಿಕೊಂಡಿದ್ದ ತನ್ನ